RNU AIR DHARWAD

DECEMBER 15, 2024

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ರಾಷ್ಟ್ರೀಯ ಲೋಕ ಅದಾಲತ್;** ರಾಜ್ಯಾದ್ಯಂತ, ರಾಜೀ–ಸಂಧಾನದ ಮೂಲಕ, ಆದ್ಯತೆಯ ಪ್ರಕರಣಗಳ, ವಿಲೇವಾರಿ.
- **ಹುಬ್ಬಳ್ಳಿ–ಧಾರವಾಡ, ವಿಜಯಪುರ** ಸೇರಿದಂತೆ, ರಾಜ್ಯದ ಐದು ನಗರಗಳಲ್ಲಿ, ಐದು ಮಿನಿ ಕ್ವಿನ್ ಸಿಟಿ ಅಭಿವೃದ್ಧಿಗೆ, ಯೋಜನೆ.
- **ಪ್ರಧಾನಮಂತ್ರಿ ಸೂರ್ಯ ಘರ್ ಮುಫ್ತ್ ಬಿಜಲಿ ಯೋಜನೆ;** ಉಜ್ವಲ ಮತ್ತು ಹಸಿರು ಭವಿಷ್ಯಕ್ಕೆ ನಾಂದಿ.
- **ಬಯಲಾಟದ ರೆಪರ್ಟರಿ,** ಬಳ್ಳಾರಿಯಲ್ಲಿ ಕಾರ್ಯಾರಂಭಿಸಲಿ – ಸಾಹಿತಿ ಕುಂ. ವೀರಭದ್ರಪ್ಪ ಆಶಯ.

<><><>

**ಈಗ ವಾರ್ತೆಗಳ ವಿವರ**

<><><>

**ರಾಜ್ಯ ಉಚ್ಚ ನ್ಯಾಯಾಲಯದ,** ಧಾರವಾಡ ಪೀಠದಲ್ಲಿ ಆಯೋಜಿಸಲಾಗಿದ್ದ, ಜನತಾ ನ್ಯಾಯಾಲಯದಲ್ಲಿ, ಒಟ್ಟು 500 ಪ್ರಕರಣಗಳನ್ನು ವಿಚಾರಣೆಗೆ ಕೈಗೆತ್ತಿಕೊಂಡು, ಆ ಪೈಕಿ, 235 ಪ್ರಕರಣಗಳನ್ನು ಮೂರು ನ್ಯಾಯಪೀಠಗಳು ಇತ್ಯರ್ಥ ಪಡಿಸಿವೆ. ಉಚ್ಚ ನ್ಯಾಯಾಲಯದ, ಕಾನೂನು ಸೇವಾ ಸಮಿತಿಯ, ಧಾರವಾಡ ಪೀಠದ ಕಾರ್ಯದರ್ಶಿ ಜೆರಾಲ್ಡ್ ಮೆಂಡೋನ್ಸಾ ಈ ವಿಷಯ ತಿಳಿಸಿ, 5 ಕೋಟಿ 86 ಲಕ್ಷ 30 ಸಾವಿರದ 660 ರೂಪಾಯಿ, ಇತ್ಯರ್ಥಗೊಂಡ ಪ್ರಕರಣಗಳ ಒಟ್ಟು ಮೊತ್ತವಾಗಿದೆ ಎಂದರು. ನ್ಯಾಯಮೂರ್ತಿ ಶ್ರೀನಿವಾಸ ಹರೀಶಕುಮಾರ್ ಅವರ ನೇತೃತ್ವದಲ್ಲಿ ಆಯೋಜಿತ ಲೋಕ ಅದಾಲತ್‌ನಲ್ಲಿ, ನ್ಯಾಯಮೂರ್ತಿಗಳಾದ ಜೆ.ಎಮ್. ಖಾಜಿ ಮತ್ತು ಟಿ. ಜಿ. ಶಿವಶಂಕರೇಗೌಡ ಪಾಲ್ಗೊಂಡಿದ್ದರು.

<><><>

**ರಾಷ್ಟ್ರೀಯ ಕಾನೂನು ಸೇವೆಗಳ** ಪ್ರಾಧಿಕಾರದ ನಿರ್ದೇಶನದಂತೆ, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಕಲಬುರಗಿ ಉಚ್ಚ ನ್ಯಾಯಾಲಯದಲ್ಲಿ, ಜನತಾ ನ್ಯಾಯಾಲಯವನ್ನು ಆಯೋಜಿಸಿತ್ತು. ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ, 205 ಪ್ರಕರಣಗಳನ್ನು, ಪರಸ್ಪರ ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಿ, 4 ಕೋಟಿ 28 ಲಕ್ಷ 99 ಸಾವಿರದ 155 ರೂಪಾಯಿ ಪರಿಹಾರಕ್ಕೆ, ಆದೇಶಿಸಲಾಗಿದೆ. ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಎಮ್.ಜಿ.ಎಸ್. ಕಮಾಲ್ ಮತ್ತು ನ್ಯಾಯಮೂರ್ತಿ ಜಿ.ಬಸವರಾಜ, ಲೋಕ ಅದಾಲತ್‌ನಲ್ಲಿ ಭಾಗವಹಿಸಿದ್ದರು.

<><><>

**ವಿಜಯಪುರ, ಹುಬ್ಬಳ್ಳಿ–ಧಾರವಾಡ** ಸೇರಿದಂತೆ, ರಾಜ್ಯದ 5 ನಗರಗಳಲ್ಲಿ, 5 ಮಿನಿ ಕ್ವಿನ್ – **Knowledge, Wellbeing, and Innovation** ಸಿಟಿ ಅಭಿವೃದ್ಧಿಪಡಿಸಿ, ಮೂಲ ಸೌಲಭ್ಯಗಳನ್ನು ಒದಗಿಸುವುದು, ರಾಜ್ಯ ಸರ್ಕಾರದ ಆದ್ಯತೆಯಾಗಿದೆ ಎಂದು, ಬೃಹತ್ ಕೈಗಾರಿಕಾ ಖಾತೆ ಸಚಿವ ಎಮ್.ಬಿ.ಪಾಟೀಲ ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮ ಎಕ್ಸ್ ನಲ್ಲಿ, ಈ ವಿಷಯ ತಿಳಿಸಿರುವ ಸಚಿವರು, ನವೋದ್ಯಮಗಳು, ಕಾರ್ಯನಿರ್ವಹಣೆ ಸ್ಥಳಗಳು, ಹಣಕಾಸು ಮತ್ತು ತಂತ್ರಜ್ಞಾನವನ್ನು ಒಳಗೊಂಡ, 'ಸ್ವಿಫ್ಟ್ ಸಿಟಿ' ಉಪಕ್ರಮವನ್ನು, ಬೆಂಗಳೂರಿನ ಸರ್ಜಾಪುರದಲ್ಲಿ, ಅನುಷ್ಠಾನಗೊಳಿಸಲು, ರಾಜ್ಯ ಸರ್ಕಾರ ಯೋಜಿಸಿದೆ ಎಂದಿದ್ದಾರೆ.

<><><>

**ಸ್ಮಾರ್ಟ್ ಇಂಡಿಯಾ ಸಾಫ್ಟ್‌ವೇರ್** ಹಾಗೂ ಹಾರ್ಡ್‌ವೇರ್ ಹ್ಯಾಕಥಾನ್, ಒಟ್ಟು 72 ತಾಸುಗಳ ಮ್ಯಾರಾಥಾನ್ ಸ್ಪರ್ಧೆ ಇಂದಿಗೆ ಪೂರ್ಣಗೊಳ್ಳಲಿದೆ. ಆಧುನಿಕ ಡಿಜಿಟಲ್ ಜಗತ್ತಿನ ನೈಜ ಸಮಸ್ಯೆಗಳಿಗೆ, ಪ್ರಾಯೋಗಿಕ ಪರಿಹಾರ ಕಂಡುಕೊಳ್ಳಲು, ಕೇಂದ್ರ ಶಿಕ್ಷಣ ಸಚಿವಾಲಯ 36 ತಾಸುಗಳ ಎರಡು ವಿವಿಧ ಹ್ಯಾಕಥಾನ್ ಸ್ಪರ್ಧೆ ಆಯೋಜಿಸಿತ್ತು.

<><><>

**ಗ್ರಾಮೀಣ ಭಾಗದ, ಪ್ರೌಢ ಶಾಲೆಗಳಲ್ಲಿ** ಓದುತ್ತಿರುವ ಮಕ್ಕಳಲ್ಲಿ, ವಿಜ್ಞಾನ ವಿಷಯದ ಬಗ್ಗೆ ಆಸಕ್ತಿ ಮತ್ತು ವೈಜ್ಞಾನಿಕ ಮನೋಭಾವ ಬೆಳೆಸಲು, ಕೇಂದ್ರ ಸರ್ಕಾರ ಆರಂಭಿಸಿದ, 'ಅಟಲ್ ಟಿಂಕರಿಂಗ್ ಲ್ಯಾಬ್', ಗ್ರಾಮೀಣ ಪ್ರತಿಭೆಗಳಲ್ಲಿ, ಅನ್ವೇಷಣೆ ಮತ್ತು ಸಂಶೋಧನಾ ಮನೋಭಾವ ಉದ್ದೀಪಿಸುವಲ್ಲಿ, ಯಶಸ್ವಿಯಾಗಿದೆ. ಧಾರವಾಡ ಜಿಲ್ಲೆ, ಅಳ್ನಾವರ ತಾಲೂಕು, ಬೆಣಚಿಯ ಸರ್ಕಾರಿ ಪ್ರೌಢ ಶಾಲೆಯ 'ಅಟಲ್ ಟಿಂಕರಿಂಗ್ ಲ್ಯಾಬ್', 'ಮೆಂಟರಿಂಗ್ ಹಬ್ ಸೆಂಟರ್' ಆಗಿ, ರೂಪುಗೊಂಡಿದೆ. ಶಾಲೆಯ ಪ್ರಧಾನ ಅಧ್ಯಾಪಕ, ಸೋಮಶೇಖರ ಬೆನಕನಾಳ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

**ಸೋಮಶೇಖರ ಬೆನಕನಾಳ ಧ್ವನಿ 60 ಸೆಕೆಂದುಗಳು**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಪ್ರಧಾನಮಂತ್ರಿ ಸೂರ್ಯ ಘರ್ ಮುಫ್ತ್ ಬಿಜಲಿ ಯೋಜನೆಯಿಂದ,** ಭಾರತದ ಸೌರ ಕ್ರಾಂತಿಗೆ ವೇಗ ವರ್ಧನೆಯಾಗಿದೆ ಎಂದು, ಕೇಂದ್ರದ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಈ ವಿಷಯ ಪ್ರಕಟಿಸಿರುವ ಅವರು, ಸೌರಶಕ್ತಿಯಿಂದ ಕುಟುಂಬಗಳ ಆರ್ಥಿಕ ಸ್ಥಿತಿ ಸಬಲಗೊಂಡಿದೆ. ಮೂರೂವರೆ ಕಿಲೋ ವ್ಯಾಟ್‌ನ, ಶೇಕಡ 77 ರಷ್ಟು ಸೌರ ಫಲಕಗಳನ್ನು ಅಳವಡಿಸುವ ಗುರಿ ಸಾಧಿಸಲಾಗಿದೆ. ಸಬ್ಸಿಡಿ ಮತ್ತು ಸರಳೀಕೃತ ಅನುಷ್ಠಾನ ಪ್ರಕ್ರಿಯೆಯಿಂದ, ಸೂರ್ಯ ಘರ ಯೋಜನೆ ಸಫಲವಾಗಿದೆ; ಎಲ್ಲರ ಉಜ್ವಲ ಮತ್ತು ಹಸಿರು ಭವಿಷ್ಯಕ್ಕೆ ನಾಂದಿಯಾಗಲಿದೆ ಎಂದಿದ್ದಾರೆ.

<><><>

**ಬಯಲಾಟದ ರೆಪರ್ಟರಿ,** ಬಳ್ಳಾರಿಯಲ್ಲಿ ಕಾರ್ಯಾರಂಭಿಸಬೇಕು ಎಂದು, ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಪುರಸ್ಕೃತ ಲೇಖಕ, ಕುಂ. ವೀರಭದ್ರಪ್ಪ ಆಶಿಸಿದ್ದಾರೆ. ಬಳ್ಳಾರಿಯ ಜೋಳದರಾಶಿ ದೊಡ್ಡನಗೌಡ ರಂಗ ಮಂದಿರದಲ್ಲಿ, 'ಕರ್ನಾಟಕ ಆಂಧ್ರ ಗಡಿ ಪ್ರದೇಶದ, ಕನ್ನಡ ಬಯಲಾಟಗಳು' ಕುರಿತ, ವಿಚಾರ ಸಂಕಿರಣ ಹಾಗೂ ಪ್ರದರ್ಶನ ಉದ್ಘಾಟಿಸಿ, ಮಾತನಾಡಿದರು. ಪದವಿ, ಸ್ನಾತಕೋತ್ತರ ಪದವಿ ಹಂತದಲ್ಲಿ ಬಯಲಾಟ ಮತ್ತು ಪಾತ್ರಧಾರಿಗಳ ಕುರಿತು ಅಧ್ಯಯನಕ್ಕೆ ಅವಕಾಶ ಕಲ್ಪಿಸಲು, ಪಠ್ಯದಲ್ಲಿ ಅಳವಡಿಸಬೇಕು ಎಂದರು. ಹೊಸತು ಮಾಸಪತ್ರಿಕೆ ಸಂಪಾದಕ, ಸಿದ್ದನಗೌಡ ಪಾಟೀಲ, ಬಯಲಾಟ ಅಕಾದೆಮಿ ಅಧ್ಯಕ್ಷ ಕೆ.ಆರ್.ದುರ್ಗಾದಾಸ ಪಾಲ್ಗೊಂಡಿದ್ದರು.

<><><>

**ಧರಣೇಂದ್ರ ಕುರಕುರಿ ಅವರ** 'ಜಾತ್ರಿ' ಕಾದಂಬರಿ, ಸ್ವಾತಂತ್ರ್ಯಪೂರ್ವದ ಗ್ರಾಮೀಣ ಭಾರತದ, ಬದುಕು-ಬವಣೆಯ ಚಿತ್ರಣವನ್ನು ಕಟ್ಟಿಕೊಡುತ್ತದೆ ಎಂದು, ಸಾಹಿತ್ಯ ಅಕಾದೆಮಿ ಅಧ್ಯಕ್ಷ ಎನ್.ಎಸ್. ಮುಕುಂದರಾಜ್ ಹೇಳಿದ್ದಾರೆ. ಧಾರವಾಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಏರ್ಪಡಿಸಿದ್ದ, ಕಾರ್ಯಕ್ರಮದಲ್ಲಿ, ಅವರು 'ಜಾತ್ರಿ' ಕಾದಂಬರಿ ಬಿಡುಗಡೆ ಗೊಳಿಸಿ ಮಾತನಾಡಿದರು. ಕಾದಂಬರಿ ಕುರಿತು, ವೆಂಕಟೇಶ ಮಾಚಕನೂರ ಅವರು, 'ಜಾತ್ರಿ' ಕಾದಂಬರಿಯಲ್ಲಿ ವ್ಯಕ್ತವಾದ, ಸೂಕ್ಷ್ಮ ಸಂವೇದನೆಗಳ ಬಗ್ಗೆ, ಮಾತನಾಡಿದರು.

<><><>

**ಯಕ್ಷರಂಗದ** ಹಿರಿಯ ಮಹಿಳಾ ಭಾಗವತರಾದ, ದಕ್ಷಿಣಕನ್ನಡ ಜಿಲ್ಲೆ ಬಜ್ಪೆ ಸಮೀಪ ತಲಕಳದ, ಲೀಲಾವತಿ ಬೈಪಡಿತ್ತಾಯ ವಯೋ ಸಹಜ ಅಸೌಖ್ಯದಿಂದ ತಮ್ಮ ಸ್ವಗೃಹದಲ್ಲಿ ನಿಧನರಾದರು. ಅವರಿಗೆ 78 ವರ್ಷ ವಯಸ್ಸಾಗಿತ್ತು. ಸುಮಾರು 40 ವರ್ಷಗಳ ಕಾಲ ಯಕ್ಷಗಾನ ಮೇಳಗಳಲ್ಲಿ ಭಾಗವತಿಕೆ ಮಾಡಿರುವ ಲೀಲಾವತಿ ಅವರಿಗೆ, 2010ರಲ್ಲಿ ಕರ್ನಾಟಕ ಯಕ್ಷಗಾನ ಅಕಾದೆಮಿ ಪ್ರಶಸ್ತಿ, 2015ರಲ್ಲಿ ಮಂಗಳೂರು ವಿಶ್ವವಿದ್ಯಾಲಯ ಕೊಡಮಾಡಿದ, ಯಕ್ಷಮಂಗಳ ಪ್ರಶಸ್ತಿ, 2023ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸಹಿತ, ಹಲವು ಪುರಸ್ಕಾರಗಳು ಸಂದಿವೆ. ಗಣ್ಯರು ಕಂಬನಿ ಮಿಡಿದಿದ್ದಾರೆ.

<><><>

**ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ** ಮತ್ತು, ಜೆ.ಎಸ್.ಎಸ್ ಶ್ರೀ ಮಂಜುನಾಥೇಶ್ವರ, ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಸಂಸ್ಥೆ, ಆತಿಥ್ಯದಲ್ಲಿ ಸಂಪನ್ನಗೊಂಡ, 71ನೇ ಅಂತರ್ ಮಹಾವಿದ್ಯಾಲಯಗಳ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ, 13 ನೂತನ ವಯಕ್ತಿಕ ದಾಖಲೆಗಳು ನಿರ್ಮಾಣವಾಗಿವೆ. ವಿಧಾನ ಪರಿಷತ್‌ನ ಸಭಾಪತಿ, ಬಸವರಾಜ ಹೊರಟ್ಟಿ, 1992ರ ಬಾರ್ಸಿಲೋನಾ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ, ಏಕಲವ್ಯ ಪ್ರಶಸ್ತಿ ಪುರಸ್ಕೃತ, ಕುಸ್ತಿಪಟು ಎಂ.ಆರ್ ಪಾಟೀಲ, ಜೆ.ಎಸ್.ಎಸ್ ಕಾರ್ಯದರ್ಶಿ ಅಜಿತ ಪ್ರಸಾದ, ಉಪ ಕುಲಪತಿ ಬಿ.ಎಂ. ಪಾಟೀಲ ವಿಜೇತ ಕ್ರೀಡಾಪಟುಗಳಿಗೆ, ಪ್ರಶಸ್ತಿ ನೀಡಿ, ಗೌರವಿಸಿದರು.

<><><>

**ಹಿರಿಯರ ರಾಷ್ಟ್ರೀಯ ಯೋಗಾಸನದ,** 5ನೇ ಆವೃತ್ತಿಯ ಚಾಂಪಿಯನ್‌ಶಿಪ್, ತುಮಕೂರಿನಲ್ಲಿ ಆಯೋಜಿತವಾಗಿದ್ದು, 31 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಂದ, 750 ಯೋಗ ಪ್ರವೀಣರು ಪಾಲ್ಗೊಂಡು, ವಿವಿಧ ಆಸನಗಳನ್ನು ಪ್ರದರ್ಶಿಸಿದರು. ಒಲಿಂಪಿಕ್ ಸಂಸ್ಥೆ ಈ ಯೋಗಾಸನ ಕೂಟವನ್ನು ಆಯೋಜಿಸಿದ್ದು, ಮೂರನೇ ದಿನವಾದ ನಿನ್ನೆ, ಸ್ಪರ್ಧೆ ಹಲವು ವಿಶೇಷತೆಗಳಿಂದ ಕೂಡಿತ್ತು, ಎಂದು ಸಂಘಟಕ ನಿರಂಜನ್ ಮೂರ್ತಿ,

ತಿಳಿಸಿದರು. ಇನ್ನೋರ್ವ ಸಂಘಟಕ ಜಯದೀಪ್ ಆರ್ಯ ಮಾತನಾಡಿ, ಜನವರಿ 28 ರಿಂದ ಫೆಬ್ರವರಿ 14ರ ವರೆಗೆ, ಉತ್ತರಾಖಂಡದಲ್ಲಿ ಆಯೋಜಿತ, ರಾಷ್ಟ್ರೀಯ ಸ್ಪರ್ಧೆಯಲ್ಲಿ ವಿಜೇತ ಯೋಗಪಟುಗಳು, ಭಾಗವಹಿಸಲಿದ್ದಾರೆ ಎಂದರು.

<><><>

**ಮೈಸೂರಿನಲ್ಲಿ ಆಯೋಜಿತ,** ರಾಷ್ಟ್ರ ಮಟ್ಟದ ಸ್ಕೇಟಿಂಗ್ ಪಂದ್ಯಾವಳಿಯಲ್ಲಿ, ಶಿವಮೊಗ್ಗ ರೋಲರ್ ಸ್ಕೇಟಿಂಗ್ ಅಸೋಸಿಯೇಷನ್ ನ ಸ್ಕೇಟರ್ ಸೈಯ್ಯದ್ ಫೈಜಲ್ ಸ್ಪೀಡ್ ರಿಲೆ ವಿಭಾಗದಲ್ಲಿ, ಬೆಳ್ಳಿ ಪದಕ ಗೆದ್ದಿದ್ದಾರೆ. ವಿಶ್ವಾಸ್ ಹಾಗೂ ಅತೀಶ್ ಅಡಿ ತರಬೇತಿ ಪಡೆಯುತ್ತಿರುವ ಸೈಯ್ಯದ್ ಅವರನ್ನು, ಸಂಸದ ಬಿ.ವೈ. ರಾಘವೇಂದ್ರ, ಸಂಸ್ಥೆಯ ಅಧ್ಯಕ್ಷ ಮೋಹನ ಕುಮಾರ ಹಾಗೂ ಕಾರ್ಯದರ್ಶಿ ಎಂ.ರವಿ ಅಭಿನಂದಿಸಿದ್ದಾರೆ.

<><><>

**ವಿಶ್ವ ಮಂಗಗಳ ದಿನಾಚರಣೆಯನ್ನು,** ಅರಣ್ಯ ಇಲಾಖೆಯ ವನ್ಯಜೀವಿ ಸಂರಕ್ಷಣಾ ವಿಭಾಗ ಆಚರಿಸಿತು. ರಾಜ್ಯದ ಅಪರೂಪದ ಸಂತತಿ ಎನಿಸಿದ, ಸಿಂಹ ಬಾಲದ ಸಿಂಗಳಿಕ, ಟಫ್ಟೆಡ್ ಸ್ಟಾಕ್ರೆಡ್ ಲಂಗೂರ್, ಮಲಬಾರ್ ಸ್ಟಾಕ್ರೆಡ್ ಲಂಗೂರ್, ರ್ಹೀಸಸ್ ಮೆಕಾಕ್ ಹಾಗೂ ಬಾನೆಟ್ ಮೆಕಾಕ್ ಮಂಗಗಳ ಬಗ್ಗೆ, ಅಭ್ಯಸಿಸುವಂತೆ, ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಇಲಾಖೆ ಕೋರಿದೆ.

<><><>

**ಈಗ ಸಂಕ್ಷಿಪ್ತ ಸುದ್ದಿಗಳು:**

<><><>

**ಗದಗ ಜಿಲ್ಲೆ, ರೋಣದಲ್ಲಿ** ಮುಖ್ಯಮಂತ್ರಿ ಸಿದ್ದರಾಮಯ್ಯ, ಇಂದು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ, ಶಿಲಾನ್ಯಾಸ ನೆರವೇರಿಸಲಿದ್ದಾರೆ ಎಂದು ಜಿಲ್ಲಾಧಿಕಾರಿ ಗೋವಿಂದರೆಡ್ಡಿ ತಿಳಿಸಿದ್ದಾರೆ.

<><><>

**ಮಂಡ್ಯದಲ್ಲಿ ಆಯೋಜಿತ,** 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಸರ್ವಾಧ್ಯಕ್ಷ ಗೊ.ರು.ಚನ್ನಬಸಪ್ಪ ಅವರನ್ನು, ಮಂಡ್ಯ ಜಿಲ್ಲಾಡಳಿತದ ಪರವಾಗಿ, ಸಚಿವ ಎನ್. ಚಲುವರಾಯಸ್ವಾಮಿ, ಅಧಿಕೃತವಾಗಿ ಆಮಂತ್ರಿಸಿದರು.

<><><>

**ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು** ಸಾಹಿತ್ಯ ಅಕಾದೆಮಿ ಸ್ಥಾಪನೆಗೊಂಡು, ಇಂದಿಗೆ, 14 ವರ್ಷಗಳು ಪೂರ್ಣಗೊಂಡವು. ಕೊಡಗು, ದಕ್ಷಿಣಕನ್ನಡ ಮತ್ತು ಮೈಸೂರು ಜಿಲ್ಲೆಗಳಲ್ಲಿ 'ಅರೆಭಾಷೆ ದಿನಾಚರಣೆ' ಕಾರ್ಯಕ್ರಮಗಳು ಆಯೋಜಿತವಾಗಿವೆ.

<><><>

**ಚಿಕ್ಕಮಗಳೂರು ಜಿಲ್ಲೆಯ** ಇನಾಂ ದತ್ತಪೀಠದಲ್ಲಿ, ಶ್ರದ್ಧಾ, ಭಕ್ತಿಯಿಂದ ಶ್ರೀ ದತ್ತ ಜಯಂತಿ ಜರುಗಿತು. ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ, ಸಹಸ್ರಾರು ದತ್ತ ಮಾಲಾಧಾರಿಗಳು, ದತ್ತ ಪಾದುಕೆ ದರ್ಶನ ಪಡೆದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ರಾಷ್ಟ್ರೀಯ ಲೋಕ ಅದಾಲತ್:** ರಾಜ್ಯಾದ್ಯಂತ, ರಾಜೀ–ಸಂಧಾನದ ಮೂಲಕ, ಆದ್ಯತೆಯ ಪ್ರಕರಣಗಳ, ವಿಲೇವಾರಿ.
- **ಹುಬ್ಬಳ್ಳಿ–ಧಾರವಾಡ, ವಿಜಯಪುರ** ಸೇರಿದಂತೆ, ರಾಜ್ಯದ ಐದು ನಗರಗಳಲ್ಲಿ, ಐದು ಮಿನಿ ಕ್ವಿನ್ ಸಿಟಿ ಅಭಿವೃದ್ಧಿಗೆ, ಯೋಜನೆ.
- **ಪ್ರಧಾನಮಂತ್ರಿ ಸೂರ್ಯ ಘರ್ ಮುಫ್ತ್ ಬಿಜಲಿ ಯೋಜನೆ:** ಉಜ್ವಲ ಮತ್ತು ಹಸಿರು ಭವಿಷ್ಯಕ್ಕೆ ನಾಂದಿ.
- **ಬಯಲಾಟದ ರೆಪರ್ಟರಿ,** ಬಳ್ಳಾರಿಯಲ್ಲಿ ಕಾರ್ಯಾರಂಭಿಸಲಿ – ಸಾಹಿತಿ ಕುಂ. ವೀರಭದ್ರಪ್ಪ ಆಶಯ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>

**ಹರ್ಷ**